**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 642/2025**

| | | |
|---|---|---|
| ಸಾಕ್ಷಿದಾರರ ಹೆಸರು | : | ಗೋವಿಂದೇಗೌಡ |
| ತಂದೆಯ ಹೆಸರು | : | ರಾಮೇಗೌಡ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹೈರಿಗೆ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 19.05.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-1 ಹಾಗೂ ಚಾಸಾ-3 ರವರ ಪರಿಚಯವಿರುತ್ತದೆ. ಅವರು ನಮ್ಮ ಪಕ್ಕದ ಜಮೀನಿನವರು ಹಾಗು ಅವರುಗಳು ಈಗಾಗಲೇ ಮೃತಪಟ್ಟಿರುತ್ತಾರೆ. ಚಾಸಾ-4 ರವರ ಪರಿಚಯವಿರುವುದಿಲ್ಲ.

ದಿನಾಂಕಃ 13.01.2025 ರಂದು ಸಂಜೆ ಸುಮಾರು 04.45 ಗಂಟೆ ಸಮಯದಲ್ಲಿ ಹೈರಿಗೆ ಗ್ರಾಮದ ವೀರಭದ್ರೇಗೌಡರವರ ಜಮೀನ ಬಳಿ ಮೈಸೂರು-ಮಾನಂದವಾಡಿ ರಸ್ತೆಯಲ್ಲಿ ಕೆಎ 09 ಎಫ್ 5601 ಕೆ.ಎಸ್.ಆರ್.ಟಿ.ಸಿ. ಬಸ್ ಅನ್ನು ಅದರ ಚಾಲಕ ಅತಿವೇಗವಾಗಿ ಚಲಾಯಿಸಿಕೊಂಡು ಬಂದು ಲಾರಿಯನ್ನು ಓವರ್ ಟೇಕ್ ಮಾಡಲು ಹೋಗಿ ಚಾಸಾ-1 ರವರು ಹೆಚ್.ಎಫ್. ಕ್ರಾಸ್ / ಜಾತಿಯ ಹಸುವಿಗೆ ಡಿಕ್ಕಿಪಡಿಸಿದ್ದು, ಆ ರೀತಿ ಡಿಕ್ಕಿಪಡಿಸಿದ ಪರಿಣಾಮ ಸದರಿ ಹಸುವಿನ ಬಲಭಾಗದ ಚಪ್ಪೆ

ಮುರಿದು ಹೋಗಿದ್ದು 02 ದಿನಗಳ ನಂತರ ಸದರಿ ಹಸು ಮೃತಪಟ್ಟಿರುತ್ತದೆ. ಸದರಿ ಹಸುವಿನ ಬೆಲೆ ಸುಮಾರು ರೂ. 45,000/- ಆಗಿರುತ್ತದೆ. ಪೋಲೀಸರು ನನ್ನನ್ನು ಈ ಬಗ್ಗೆ ವಿಚಾರಣೆ ಮಾಡಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಾಗಿದ್ದು, ಅವರ ಪರ ವಕೀಲರು ಹಾಜರಾತಿ ವಿನಾಯಿತಿಯ ಅರ್ಜಿಯನ್ನು ಸಲ್ಲಿಸಿದ್ದು ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

<u>**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಸಿ.ಹೆಸ್.ಸಿ. / ಶ್ರೀ. ಹೆಚ್.ಜಿ.ವಿ. ವಕೀಲರಿಂದಃ**</u>

ಚಾಸಾ-1 ಮತ್ತು ಚಾಸಾ-1 ರವರು ನನಗೆ ಯಾವುದೇ ಸಂಬಂಧಿಕರಲ್ಲ. ಸದರಿ ಹಸು ಚಾಸಾ-1 ರವರಿಗೆ ಸೇರಿತ್ತು ಎಂಬ ಬಗ್ಗೆ ದಾಖಲೆಯನ್ನು ನೀಡಿದ್ದಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ಹಸುವನ್ನು ಖರೀದಿ ಮಾಡಿದ ನಂತರ ಅದನ್ನು ಹಾಲಿನ ಡೈರಿಯಲ್ಲಿ ಎಂಟ್ರಿ ಮಾಡಿಸಿ ಅದಕ್ಕೆ ವಿಮೆ ಮಾಡಿಸುತ್ತಾರೆಂದರೆ ಸರಿ. ಆ ರೀತಿ ಸದರಿ ಹಸುವಿನ ಎಂಟ್ರಿ ಮಾಡಿಸಿದ ಬಗ್ಗೆ ಹಾಗು ಅದಕ್ಕೆ ವಿಮೆ ಮಾಡಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮೈಸೂರು-ಮಾನಂದವಾಡಿ ರಸ್ತೆ ತುಂಬಾ ವಾಹನ ನಿಬಿಡ ರಸ್ತೆಯಾಗಿರುತ್ತದೆಂದರೆ ಸರಿ. ಹೈರಿಗೆ ರಸ್ತೆಯಲ್ಲಿ ಎತ್ತಿನ ಗಾಡಿ ಹಾಗು ಜನಗಳು ಸಹ ಓಡಾಡಿಕೊಂಡು ಹೋಗುತ್ತಾರೆಂದರೆ ಸರಿ. ಆ ಸಮಯದಲ್ಲಿ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸಾಕ್ಷಿಯು ಕೆಲವೊಂದು ವಾಹನಗಳು ನಿಧಾನವಾಗಿ ಚಲಿಸುತ್ತದೆ ಮತ್ತು ಇನ್ನು ಕೆಲವು ವಾಹನಗಳು ಜೋರಾಗಿ ಚಲಿಸುತ್ತವೆಂದು ನುಡಿಯುತ್ತಾರೆ. ಆರೋಪಿಯು ಯಾವ ಲಾರಿಯನ್ನು ಒವರ್ ಟೇಕ್ ಮಾಡಿದ್ದರೆಂದು ಸದರಿ ಲಾರಿಯ

ನೋಂದಣಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಯು ಕೆ.ಎಸ್.ಆರ್.ಟಿ.ಸಿ. ಬಸ್ ಅನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಹಸುವಿಗೆ ಯಾವುದೇ ಡಿಕ್ಕಿಪಡಿಸಿರುವುದಿಲ್ಲವೆಂದರೆ ಸರಿಯಲ್ಲ. ಅದೇ ರೀತಿ ಘಟನೆ ನಡೆಯಲಾಯಿತೆಂದು ಹೇಳಿದ ಸಮಯದಲ್ಲಿ ನಾನು ಸ್ಥಳದಲ್ಲಿ ಇದ್ದಿರುವುದಿಲ್ಲ, ಬದಲಾಗಿ ಚಾಸಾ-1 ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೋಲೀಸರು ನನ್ನನ್ನು ಯಾವುದೇ ವಿಚಾರಣೆ ಮಾಡಿರುವುದಿಲ್ಲವೆಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇರುವುದಿಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**